**All India Radio: Bangalore**
**National Bulletin In Kannada**
**16.09.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**16.09.2025 19.35 p.m.**
**<><><><>**

ಮುಖ್ಯಾಂಶಗಳು

- ಸೆಮಿಕಂಡಕ್ಟರ್ ಮತ್ತು ಚಿಪ್ ಉತ್ಪಾದನಾ ಕೇಂದ್ರವಾಗಿ ಭಾರತ ಸನ್ನದ್ಧವಾಗಿದೆ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್
- ಹಿಂಗಾರು ಋತುವಿನಲ್ಲಿ ೩೬ ಕೋಟಿ ೨೫ ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಗುರಿ - ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್
- ವೈದ್ಯಕೀಯ ತಂತ್ರಜ್ಞಾನ, ವೈದ್ಯಕೀಯ ಸಾಧನ ವಲಯ ಆರೋಗ್ಯ ಪರಿವರ್ತನೆಯ ಆಧಾರಸ್ತಂಭ-ಕೇಂದ್ರ ಸಚಿವ ಜೆ.ಪಿ. ನಡ್ಡಾ
- ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ : ಬ್ಯಾಟಿಂಗ್ ಶ್ರೇಯಾಂಕದಲ್ಲಿ ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಮತ್ತೆ ಅಗ್ರಸ್ಥಾನ

<><><><>

ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಭಾರತ ಈಗಾಗಲೇ ಆರಂಭಿಕ ಸಿದ್ದತೆಗಳನ್ನು ಪೂರೈಸಿದ್ದು, ಸೆಮಿಕಂಡಕ್ಟರ್ ಮತ್ತು ಚಿಪ್ ಉತ್ಪಾದನಾ ಕೇಂದ್ರವಾಗಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಲು ಸನ್ನದ್ಧವಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಅವರು ಬೆಂಗಳೂರಿನಲ್ಲಿ ಇಂದು ಬ್ರಿಟಿಷ್ ಮೂಲದ ಸೆಮಿಕಂಡಕ್ಟರ್ ತಯಾರಿಕಾ ಮತ್ತು ತರಬೇತಿ ಕೇಂದ್ರ ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ಈಗಾಗಲೇ ೧೦ ಕಂಪನಿಗಳು ಚಿಪ್ ತಯಾರಿಕಾ ಘಟಕಗಳನ್ನು ಆರಂಭಿಸಿವೆ ಎಂದು ಹೇಳಿದ್ದಾರೆ. ಭಾರತದಲ್ಲಿ ೨೦೨೨ರಲ್ಲಿ ಸೆಮಿಕಂಡಕ್ಟರ್ ಅಭಿಯಾನವನ್ನು ಪ್ರಾರಂಭಿಸಿದಾಗ ದೂರದೃಷ್ಟಿಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಸೆಮಿಕಂಡಕ್ಟರ್ ಮತ್ತು ಚಿಪ್ ಉತ್ಪಾದನೆಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುವ ನಿರ್ಧಾರ ಮಾಡಲಾಗಿತ್ತು. ಆ ಕಾರಣಕ್ಕೆ ಸಾಕಷ್ಟು ಕಂಪನಿಗಳು ಭಾರತಕ್ಕೆ ಬಂದಿವೆ. ಈಗಾಗಲೇ ಹಲವು ಕಂಪನಿಗಳು ಪೈಲೆಟ್ ಉತ್ಪಾದನೆ ಪ್ರಾರಂಭಿಸಿದ್ದು, ಸದ್ಯದಲ್ಲೇ ಇನ್ನು ಕೆಲವು ಕಂಪನಿಗಳ ಉತ್ಪಾದನೆ ಪ್ರಾರಂಭಿಸಲಿದೆ ಎಂದು ಅವರು ಹೇಳಿದರು. ಭಾರತ ಮತ್ತು ಬ್ರಿಟನ್ ಬಹಳ ಬಲವಾದ ತಂತ್ರಜ್ಞಾನ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಹೊಂದಿವೆ. ನಾವು ಎರಡೂ ದೇಶಗಳ ನಡುವೆ ನಾವು ತುಂಬಾ

ಸಹಯೋಗವನ್ನು ಹೊಂದಿದ್ದೇವೆ. ಸೆಮಿಕಂಡಕ್ಟರ್ ಮಿಷನ್ ಆವೃತ್ತಿ ೨.೦ ಉತ್ತಮ ಆರಂಭವಾಗಿದೆ. ನಾವು ಚಿಪ್‌ಗಳನ್ನು ತಯಾರಿಸಲು ಬೇಕಾದ ಉಪಕರಣಗಳು ಮತ್ತು ವಸ್ತುಗಳನ್ನು ನಮ್ಮ ದೇಶದಲ್ಲಿ ಅಭಿವೃದ್ಧಿಪಡಿಸಲು ಕೆಲಸ ಮಾಡಲಾಗುತ್ತಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

**ಧ್ವನಿ : ಅಶ್ವಿನಿ ವೈಷ್ಣವ್ (೪೩ ಸೆಕೆಂಡ್‌ಗಳು)**

<><><><>

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ೨೦೨೫-೨೬ ಹಿಂಗಾರು ಋತುವಿನಲ್ಲಿ ಆಹಾರ ಧಾನ್ಯ ಉತ್ಪಾದನೆಗೆ ರಾಷ್ಟ್ರೀಯ ಗುರಿಯನ್ನು ೩೬ ಕೋಟಿ ೨೫ ಲಕ್ಷ ಟನ್‌ಗಳಿಗೆ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಕೃಷಿ ಸಮ್ಮೇಳನ-ರಾಬಿ ಅಭಿಯಾನ-೨೦೨೫ ರ ಸಂದರ್ಭದಲ್ಲಿ ರಾಜ್ಯ ಕೃಷಿ ಸಚಿವರೊಂದಿಗೆ ಚರ್ಚೆಯ ಅಧ್ಯಕ್ಷತೆ ವಹಿಸಿದ ನಂತರ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಚೌಹಾಣ್ ಈ ಮಾಹಿತಿ ನೀಡಿದ್ದಾರೆ.

**ಧ್ವನಿ : ಶಿವರಾಜ್ ಸಿಂಗ್ ಚೌವ್ಹಾಣ್ (೨೦ ಸೆಕೆಂಡ್‌ಗಳು)**

ಈ ವರ್ಷದ ಗುರಿ ೨೦೨೪-೨೫ ರಲ್ಲಿ ಸಾಧಿಸಿದ ಆಹಾರ ಧಾನ್ಯ ಉತ್ಪಾದನೆಗಿಂತ ಶೇಕಡ ೨.೪ ರಷ್ಟು ಹೆಚ್ಚಾಗಿದೆ ಎಂದ ಸಚಿವರು, ದೇಶದ ಅವಶ್ಯಕತೆಗಳನ್ನು ಪೂರೈಸಲು ಸಾಕಷ್ಟು ಬೀಜ ದಾಸ್ತಾನು ಲಭ್ಯವಿದೆ ಎಂದರು. ಸಮ್ಮೇಳನದ ಧ್ಯೇಯವಾಕ್ಯವಾದ "ಒಂದು ರಾಷ್ಟ್ರ, ಒಂದು ಕೃಷಿ, ಒಂದು ತಂಡ" ಕೃಷಿ ವಲಯದಲ್ಲಿ ಸಮನ್ವಯ ಮತ್ತು ಪಾಲುದಾರಿಕೆಯನ್ನು ಬಲಪಡಿಸುವ ಮಹತ್ವದ ನಡೆಯನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವರು ಒತ್ತಿ ಹೇಳಿದರು.

<><><><>

ವೈದ್ಯಕೀಯ ತಂತ್ರಜ್ಞಾನ ವಲಯ ಭಾರತದಲ್ಲಿ ಆರೋಗ್ಯ ಪರಿವರ್ತನೆಯ ಪ್ರಮುಖ ಆಧಾರಸ್ತಂಭವಾಗಿದೆ ಎಂದು ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಹೇಳಿದ್ದಾರೆ. ವೈದ್ಯಕೀಯ ತಂತ್ರಜ್ಞಾನ ವಲಯ ನವದೆಹಲಿಯಿಂದ ವೀಡಿಯೊ ಸಂದೇಶದ ಮೂಲಕ ೧೧ನೇ ಏಷ್ಯಾ ಪೆಸಿಫಿಕ್ ಮೆಡ್‌ಟೆಕ್ ಫೋರಂ-೨೦೨೫ರ ಉದ್ಘಾಟನಾ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ನಾಗರಿಕರಿಗೂ ಆರೋಗ್ಯ ಸೇವೆಯನ್ನು ಹೆಚ್ಚು ಸುಲಭವಾಗಿ, ಪರಿಣಾಮಕಾರಿಯಾಗಿ ಮತ್ತು ಕೈಗೆಟುಕುವಂತೆ ಮಾಡಲು ರೋಗನಿರ್ಣಯ, ಸುಧಾರಿತ ಸಾಧನಗಳು, ಡಿಜಿಟಲ್ ಆರೋಗ್ಯ ಮತ್ತು ಕೃತಕಬುದ್ಧಿಮತ್ತೆ-ಚಾಲಿತ ಪರಿಹಾರಗಳನ್ನು ಒಳಗೊಂಡ ಈ ವಲಯದ ವಿಶಾಲ ವ್ಯಾಪ್ತಿಯ ಬಗ್ಗೆ ವಿವರಿಸಿದರು. ಭಾರತದ ವೈದ್ಯಕೀಯ ತಂತ್ರಜ್ಞಾನ ಮತ್ತು ವೈದ್ಯಕೀಯ ಸಾಧನಗಳ ವಲಯಗಳನ್ನು ಬಲಪಡಿಸಲು ಕೈಗೊಂಡ ಹಲವಾರು ಪ್ರಮುಖ ಸರ್ಕಾರಿ

ಉಪಕ್ರಮಗಳು, ವೈದ್ಯಕೀಯ ಸಾಧನಗಳಲ್ಲಿ ೧೦೦ ಪ್ರತಿಶತ ಎಫ್‌ಡಿಐ ಸೇರಿದಂತೆ ಸರ್ಕಾರದ ಹೂಡಿಕೆದಾರ ಸ್ನೇಹಿ ನೀತಿಗಳ ಕುರಿತು ಆರೋಗ್ಯ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಪ್ರಸ್ತಾಪಿಸಿದರು.

<><><>

ಇಂದು ನವದೆಹಲಿಯಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಯ ಎರಡನೇ ರಾಷ್ಟ್ರೀಯ ಸಮ್ಮೇಳನವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟಿಸಿದರು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಸ್ಥರು, ಇತರ ಸರ್ಕಾರಿ ಇಲಾಖೆಗಳ ಪಾಲುದಾರರನ್ನು ಹೊರತುಪಡಿಸಿ, ೩೬ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಯ ಮುಖ್ಯಸ್ಥರು ಎರಡು ದಿನಗಳ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ.

<><><>

ಸ್ವಾಮಿ ವಿವೇಕಾನಂದರ ಜೀವನ ದರ್ಶನದ ಸ್ಫೂರ್ತಿದಾಯಕ ಚಲನಚಿತ್ರ "ಚಲೋ ಜೀತೆ ಹೆ", ನಾಳೆಯಿಂದ ಅಕ್ಟೋಬರ್ ೨ರವರೆಗೆ ದೇಶದಾದ್ಯಂತ ವಿಶೇಷ ಪುನಃ ಪ್ರದರ್ಶನಗೊಳ್ಳಲಿದೆ. ವಿವೇಕಾನಂದರ ಪರರಿಗಾಗಿ ಯಾರು ಜೀವಿಸುತ್ತಾರೋ ಅವರು ನಿಜವಾಗಿ ಜೀವಿಸುತ್ತಾರೆ ಎನ್ನುವ ತತ್ವಾಧಾರಿತ ಈ ಚಿತ್ರ, ೨೦೧೮ ರಲ್ಲಿ ಅತ್ಯಧಿಕ ವೀಕ್ಷಿಸಲಾದ ಕಿರುಚಿತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಈ ಚಲನಚಿತ್ರವು ಲಕ್ಷಾಂತರ ಶಾಲೆಗಳಲ್ಲಿ, ದೇಶದಾದ್ಯಂತ ನೂರುಕ್ಕಿಂತ ಹೆಚ್ಚು ನಗರಗಳಲ್ಲಿ ಇರುವ ಸುಮಾರು ೫೦೦ ಚಲನಚಿತ್ರ ಮಂದಿರಗಳಲ್ಲಿ ಪ್ರದರ್ಶನಗೊಳ್ಳಲಿವೆ. ಈ ಚಲನಚಿತ್ರವನ್ನು ಪಿವಿಆರ್, ಐನಾಕ್ಸ್, ಸಿನೆಪೊಲಿಸ್, ರಾಜಹಂಸ್ ಮತ್ತು ಮಿರಾಜ್ ಮಾಲಿಕತ್ವದ ಚಿತ್ರಮಂದಿರಗಳಲ್ಲೂ ಪ್ರದರ್ಶಿಸಲಾಗುವುದು.

<><><>

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಸ್ವಚ್ಛತಾ ಚಟುವಟಿಕೆಗಳನ್ನು ಬಲಪಡಿಸುವ ಹಾಗೂ ಸಂಘಟನೆಯ ಎಲ್ಲಾ ಹಂತಗಳಲ್ಲಿ ಬಾಕಿ ಕೆಲಸಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು ತಿಂಗಳ ಕಾಲ ನಡೆಯಲಿರುವ ವಿಶೇಷ ಅಭಿಯಾನ ೫.೦ನ್ನು ಘೋಷಿಸಿದೆ. ಮುಂದಿನ ತಿಂಗಳ ೨ರಂದು ಪ್ರಾರಂಭವಾಗಲಿರುವ ಈ ಅಭಿಯಾನವು ಪ್ರತಿಕ್ರಿಯಾಶೀಲ ಆಡಳಿತ, ಪಾರದರ್ಶಕತೆ ಮತ್ತು ನಾಗರಿಕ-ಪ್ರಥಮ ನಿಲುವಿಗೆ ಸಚಿವಾಲಯ ನೀಡಿರುವ ಬದ್ಧತೆಯನ್ನು ಮರುಸ್ಥಾಪಿಸಲು ಉದ್ದೇಶಿತವಾಗಿದೆ. ಸಚಿವಾಲಯದ ಪ್ರಕಾರ, ಸ್ವಚ್ಛತಾ ಸಂಸ್ಕೃತಿಯನ್ನು ಸಂಸ್ಥಾತ್ಮಕಗೊಳಿಸಲು ಹಾಗೂ ನಿರ್ವಹಣೆಯಲ್ಲಿನ ಬಾಕಿತನವನ್ನು ಕಡಿಮೆ ಮಾಡಲು ಸರ್ಕಾರ ಗಂಭೀರ ಹೆಜ್ಜೆಗಳನ್ನು ವಹಿಸುತ್ತಿದೆ. ಈ ಕ್ರಮಗಳು ಸಚಿವಾಲಯ, ಅದರ ಸ್ವಾಯತ್ತ ಸಂಸ್ಥೆಗಳು ಮತ್ತು ಕ್ಷೇತ್ರ ಮಟ್ಟದ ಘಟಕಗಳಲ್ಲಿ ಜಾರಿಗೆ ಬರಲಿವೆ.

<><><><>

ಉತ್ತರಾಖಂಡದ ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆಯಿಂದಾಗಿ ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಭೂಕುಸಿತಗಳು ಹಲವಾರು ರಸ್ತೆಗಳು ಹಾನಿಗೀಡಾಗಿದ್ದು, ರಾಜ್ಯದ ಪ್ರಮುಖ ನದಿಗಳು ಸಾಮಾನ್ಯ ಮಟ್ಟ ಮೀರಿ ಹರಿಯುತ್ತಿವೆ. ರಾಜಧಾನಿ ಡೆಹ್ರಾಡೂನ್‌ನಲ್ಲಿ, ನಿನ್ನೆ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಸಹಸ್ರಧಾರದ ಕಾರ್ಲಿಗಾಡ್ ಪ್ರದೇಶದಲ್ಲಿ ಹಲವಾರು ಮನೆಗಳಿಗೆ ನೀರು ನುಗ್ಗಿದೆ. ಜನಪ್ರಿಯ ಪ್ರವಾಸಿ ತಾಣ ಸಹಸ್ರಧಾರಕ್ಕೂ ಹಾನಿಯಾಗಿದ್ದು, ಕೆಲವು ಅಂಗಡಿಗಳು ನಾಶವಾಗಿವೆ ಎಂದು ವರದಿಯಾಗಿದೆ. ಅತಿಯಾದ ಮಳೆಯಿಂದ ಉಂಟಾದ ಪರಿಸ್ಥಿತಿಯ ಕುರಿತು ವಿವರವಾದ ಮಾಹಿತಿ ಪಡೆಯಲು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು. ಅವರು ಕೇಂದ್ರ ಸರ್ಕಾರದಿಂದ ಸಂಪೂರ್ಣ ಬೆಂಬಲದ ಭರವಸೆ ನೀಡಿದ್ದು, ಈ ಬಿಕ್ಕಟ್ಟಿನ ಸಮಯದಲ್ಲಿ ಕೇಂದ್ರವು ರಾಜ್ಯದೊಂದಿಗೆ ದೃಢವಾಗಿ ನಿಲ್ಲುತ್ತದೆ ಎಂದು ಹೇಳಿದರು.

<><><><>

ಮಾರಿಷಸ್ ಪ್ರಧಾನಿ ನವೀನಚಂದ್ರ ರಾಮಗೂಲಂ ಅವರು ಇಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಾಷ್ಟ್ರಪತಿಯವರು ಎರಡೂ ದೇಶಗಳ ನಡುವಿನ ಸಂಬಂಧಗಳು ವಿಶಿಷ್ಟವಾಗಿದ್ದು, ನಮ್ಮ ಇತಿಹಾಸ, ಭಾಷೆ, ಸಂಸ್ಕೃತಿ ಮತ್ತು ಮೌಲ್ಯಗಳಲ್ಲಿ ಬೇರೂರಿದೆ ಎಂದು ರಾಮಗೂಲಂ ಅವರು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಧಾನಿ ರಾಮಗೂಲಂ ಅವರ ವಿಶಾಲ ನಾಯಕತ್ವದ ಅನುಭವದೊಂದಿಗೆ, ಭಾರತ-ಮಾರಿಷಸ್ ದೀರ್ಘಕಾಲದ ದ್ವಿಪಕ್ಷೀಯ ಸಂಬಂಧಗಳು ಮುಂಬರುವ ದಿನಗಳಲ್ಲಿ ಮತ್ತಷ್ಟು ಬಲಗೊಳ್ಳಲಿವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಾರಿಷಸ್ ಪ್ರಧಾನಿ ರಾಮ್‌ಗೂಲಂ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ದೆಹಲಿಯಲ್ಲಿಂದು ಭೇಟಿ ಮಾಡಿದರು. ರಾಮ್‌ಗೂಲಂ ೯ ರಂದು ಆರಂಭವಾಗಿರುವ ತಮ್ಮ ಭಾರತ ಪ್ರವಾಸದಲ್ಲಿ ಮುಂಬೈ, ವಾರಾಣಸಿ, ಅಯೋಧ್ಯೆ ಮತ್ತು ತಿರುಪತಿಗೆ ಭೇಟಿ ನೀಡಿದ್ದಾರೆ.

<><><><>

ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಮತ್ತೆ ಅಗ್ರಸ್ಥಾನದಲ್ಲಿದ್ದಾರೆ. ಭಾನುವಾರ ನಡೆದ ಆಸ್ಟ್ರೇಲಿಯಾ ವಿರುದ್ಧದ

ಸರಣಿಯ ಮೊದಲ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ ನಂತರ ಸ್ಮೃತಿ ಮಂದಾನ, ಇಂಗ್ಲೆಂಡ್ ನಾಯಕಿ ನ್ಯಾಟ್ ಸಿವರ್-ಬ್ರಂಟ್ ಅವರನ್ನು ಹಿಂದಿಕ್ಕಿದರು. ಚಂಡೀಗಢದಲ್ಲಿ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ಏಕದಿನ ಪಂದ್ಯದಲ್ಲಿ ಮಂದಾನ ೬೩ ಎಸೆತಗಳಲ್ಲಿ ೫೮ ರನ್ ಗಳಿಸಿದರು. ಇದರೊಂದಿಗೆ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಮಂದಾನ, ಏಳು ರೇಟಿಂಗ್ ಪಾಯಿಂಟ್‌ಗಳನ್ನು ಪಡೆದರು. ಐಸಿಸಿ ಮಹಿಳಾ ವಿಶ್ವಕಪ್‌ನ ೧೩ನೇ ಆವೃತ್ತಿಗೆ ಸಜ್ಜಾಗುತ್ತಿರುವ ಭಾರತ ವನಿತೆಯರ ತಂಡಕ್ಕೆ ಇದು ಸಕಾರಾತ್ಮಕ ಅಂಶವಾಗಿದೆ.

<><><>

ಪ್ರಧಾನ ಮಂತ್ರಿ ನರೇಂದ್ರ ಮೋದಿ ಇಂದು ಸಾಮಾಜಿಕ ಮಾಧ್ಯಮದಲ್ಲಿ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯಾ ಅವರ ಲೇಖನವನ್ನು ಹಂಚಿಕೊಂಡಿದ್ದಾರೆ. 'ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಸಬ್ಕಾ ಪ್ರಯಾಸ್' ಎಂಬ ದೃಷ್ಟಿಕೋನ ಈಗ ದೈನಂದಿನ ಜೀವನದ ಭಾಗವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ವಿದ್ಯುತ್ ಮೂಲಭೂತ ಹಕ್ಕಾಗಿ ಮಾರ್ಪಟ್ಟಿದೆ, ಕಲ್ಯಾಣ ಪ್ರಯೋಜನಗಳನ್ನು ನೇರವಾಗಿ ತಲುಪಿಸಲಾಗುತ್ತದೆ ಮತ್ತು ಮೂಲಸೌಕರ್ಯವನ್ನು ಡಿಜಿಟಲ್ ಸಮನ್ವಯದ ಮೂಲಕ ಯೋಜಿಸಲಾಗಿದೆ ಎಂದು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಈ ವಿಧಾನವನ್ನು ಪ್ರಧಾನಿಯವರು ಮೊದಲು ಗುಜರಾತ್‌ನಲ್ಲಿ ಜಾರಿಗೆ ತಂದ ಭಾರತೀಯ ಮಾದರಿ ಎಂದು ಕರೆದರು ಮತ್ತು ನಂತರ ಭಾರತದಾದ್ಯಂತ ವಿಸ್ತರಿಸಲಾಯಿತು. ಇದು ಆಡಳಿತವನ್ನು ಕಟ್ಟಕಡೆಯ ವ್ಯಕ್ತಿಗೂ ತಲುಪಿಸಿ ೨೦೪೭ರ ವೇಳೆಗೆ ದೇಶವನ್ನು ವಿಕಸಿತ ಭಾರತ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಪ್ರಶಂಸಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>